Website:www.bwssb.gov.in

FAX : 080-22945102
Phone : 22945247

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560009.

ಸಂಖ್ಯೆ: ಬೆಂಜಮಂ
No : BWSSB CHAD/EST10/2/2020/ 5300 /2019-20 ದಿನಾಂಕ Date 11-03-2020

## ತಿದ್ದುಪಡಿ ಪ್ರಕಟಣೆ

ವಿಷಯ : ಮಂಡಳಿಯ ತರಬೇತಿ ಕೇಂದ್ರಕ್ಕೆ "ತರಬೇತಿ ನಿರ್ದೇಶಕ"ರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಅರ್ಹತಾ ಷರತ್ತುಗಳು ಹಾಗೂ ಅವಧಿಯನ್ನು ವಿಸ್ತರಿಸುವ ಬಗ್ಗೆ

ಉಲ್ಲೇಖ : 1. ತರಬೇತಿ ನಿರ್ದೇಶಕರ ಗುತ್ತಿಗೆ ಆಧಾರದ ಮೇಲೆ ನೇಮಕಾತಿಯ ಪತ್ರಿಕಾ ಪ್ರಕಟಣೆ ದಿನಾಂಕ: 24.02.2020.

2. ಮಾನ್ಯ ಅಧ್ಯಕ್ಷರ ಅನುಮೋದನೆಯ ದಿನಾಂಕ: 11.03.2020

---**---

ಉಲ್ಲೇಖ 1ರಂತೆ, ಮಂಡಳಿಯ ತರಬೇತಿ ಕೇಂದ್ರಕ್ಕೆ "ತರಬೇತಿ ನಿರ್ದೇಶಕರನ್ನು" ಮಾಸಿಕ ರೂ. 1,00,000/- ಗಳ ಸಂಭಾವನೆಯೊಂದಿಗೆ 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಸೂಕ್ತ ನಿಬಂಧನೆಗಳನುಸಾರ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ದಿ: 10.03.2020 ಕೊನೆಯ ದಿನಾಂಕವಾಗಿರುತ್ತದೆ. ಮಂಡಳಿಯ ಹಿತದೃಷ್ಟಿಯಿಂದ ಸದರಿ ಪ್ರಕಟಣೆಗೆ ಈ ಕೆಳಕಂಡಂತೆ ಸೂಕ್ತ ಅವಶ್ಯಕ ತಿದ್ದುಪಡಿಗಳೊಂದಿಗೆ ತಿದ್ದುಪಡಿ ಪ್ರಕಟಣೆಯನ್ನು ಹೊರಡಿಸಲಾಗಿದೆ.

| ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ವಿದ್ಯಾರ್ಹತೆ / ಸೇವಾ ಅರ್ಹತೆ |
|---|---|---|
| ತರಬೇತಿ ನಿರ್ದೇಶಕರು | 1 | 1. ಬೆಂಗಳೂರು ಜಲಮಂಡಳಿಯಲ್ಲಿ ಪ್ರಧಾನ ಮುಖ್ಯ ಅಭಿಯಂತರ/ ಮುಖ್ಯ ಅಭಿಯಂತರ/ಅಪರ ಮುಖ್ಯ ಅಭಿಯಂತರರಾಗಿ ಕಾರ್ಯನಿರ್ವಹಿಸಿ ವಯೋ ನಿವೃತ್ತಿ ಹೊಂದಿರಬೇಕು.<br>2. 65 ವರ್ಷ ವಯಸ್ಸಿನ ಒಳಗಿನವರಾಗಿರಬೇಕು ಹಾಗೂ ಆರೋಗ್ಯವಾಗಿ ಸದೃಢರಾಗಿರಬೇಕು.<br>3. ತಾಂತ್ರಿಕ ಹಾಗೂ ಆಡಳಿತಾತ್ಮಕ ವಿಷಯಗಳ ಬಗ್ಗೆ ಆಳವಾದ ಜ್ಞಾನ ಹೊಂದಿರಬೇಕು. |

| | | |
|---|---|---|
| | | 4. ತರಬೇತಿಯ ರೀತಿ–ನೀತಿ ಕಾರ್ಯವಿಧಾನದ ಬಗ್ಗೆ ಜ್ಞಾನ ಮತ್ತು ಸಾಮರ್ಥ್ಯವನ್ನು ಹೊಂದಿರಬೇಕು.<br>5. ಮಂಡಳಿಯ ಅಧಿಕಾರಿ/ನೌಕರರಿಗೆ ತರಬೇತಿಯನ್ನು ಆಯೋಜಿಸುವ ನಿಟ್ಟಿನಲ್ಲಿ ಅಧಿಕಾರಿ/ನೌಕರರು ಹಾಗೂ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಹಾಗೂ ಮಂಡಳಿಯ ಆಡಳಿತ/ ತಾಂತ್ರಿಕ ವರ್ಗದೊಂದಿಗೆ ಸಮನ್ವಯ ಸಾಧಿಸುವ ಸಾಮರ್ಥ್ಯ ಹೊಂದಿರಬೇಕು. |

ಮಂಡಳಿಯು ವಿಧಿಸುವ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿ ಕರ್ತವ್ಯ ನಿರ್ವಹಿಸಲು ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ ವೈಯುಕ್ತಿಕ ಹಾಗೂ ಮಂಡಳಿಯಲ್ಲಿ ಸೇವೆ ಸಲ್ಲಿಸಿರುವ ವಿವರ ಹಾಗೂ ಪಿಂಚಣಿ ಪುಸ್ತಕದ ನಕಲು ಪ್ರತಿಯ ವಿವರಗಳೊಂದಿಗೆ "ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, 1ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು" ಇವರಿಗೆ ಅರ್ಜಿಯನ್ನು ಸಲ್ಲಿಸಲು ದಿನಾಂಕ: 27.3.2020 ರಂದು ಕೊನೆಯ ದಿನಾಂಕವಾಗಿರುತ್ತದೆ. ಈ ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಗಳು ಹಾಗೂ ಷರತ್ತುಗಳು ಇನ್ನಿತರ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಕರ್ತವ್ಯದ ವೇಳೆ ಬೆಳಿಗ್ಗೆ 10.00 ಘಂಟೆಯಿಂದ ಸಂಜೆ 5.30 ಘಂಟೆಯೊಳಗೆ ಸಂಪರ್ಕಿಸುವುದು.

11/3/2020

ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ

ಬೆಂಗಳೂರು ಜಲಮಂಡಳಿ.

11/3/2020.

**ಪ್ರತಿಯನ್ನು:**

ಸಾರ್ವಜನಿಕ ಪ್ರಕಟಣೆಗಾಗಿ.